# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 554 |
| ಸದಸ್ಯರ ಹೆಸರು | : | ಡಾ॥ ವೈ.ಎ.ನಾರಾಯಣಸ್ವಾಮಿ (ಶಿಕ್ಷಕರ ಕ್ಷೇತ್ರ) |
| ಉತ್ತರಿಸಬೇಕಾದ ದಿನಾಂಕ | : | 13-12-2018 |
| ಉತ್ತರಿಸುವ ಸಚಿವರು | : | ಮಾನ್ಯ ಮುಖ್ಯಮಂತ್ರಿಗಳು |

| ಪ್ರಶ್ನೆ | ಉತ್ತರ |
|---|---|
| (ಅ) ರಾಜ್ಯದಲ್ಲಿ ಎಸ್.ಎಸ್.ಎ/ಆರ್.ಎಂ.ಎಸ್.ಎ. ಶಿಕ್ಷಕರಿಗೆ 3-6 ತಿಂಗಳವರೆಗೆ ಸಂಬಳ ಆಗದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ಬಂದಿದೆ. |
| (ಆ) ಬಂದಿದ್ದಲ್ಲಿ ಈ ಸಂಬಂಧ ಸರ್ಕಾರ ಕೈಗೊಂಡಿರುವ ಕ್ರಮಗಳೇನು? | 2018-19ನೇ ಸಾಲಿಗೆ ಪರಿಷ್ಕೃತ ಆಯವ್ಯಯದಲ್ಲಿ ಎಸ್.ಎಸ್.ಎ/ಆರ್.ಎಂ.ಎಸ್.ಎ ಶಾಲಾ ಶಿಕ್ಷಕರ ವೇತನಕ್ಕಾಗಿ ನಿಗದಿಯಾದ ಅನುದಾನ – ರೂ.143433.00 ಲಕ್ಷಗಳು ನಿಗದಿಯಾಗಿದ್ದು, ಈ ವರೆಗೆ ಮೂರು ತ್ರೈಮಾಸಿಕಗಳಲ್ಲಿ ಬಿಡುಗಡೆಯಾದ ಅನುದಾನ, ಒಟ್ಟು – ರೂ.107174.50 ಲಕ್ಷಗಳು ಹಾಗೂ ಜುಲೈ 2018 ರವರಗೆ ಶಿಕ್ಷಕರ ವೇತನಕ್ಕೆ ಅನುದಾನ ಕೊರತೆ ಇರುವ ಜಿಲ್ಲೆಗಳಿಗೆ ತಾಲ್ಲೂಕುವಾರು 3ನೇ ತ್ರೈಮಾಸಿಕಕ್ಕಿಂತ ಹೆಚ್ಚುವರಿಯಾಗಿ 2018-19ನೇ ಸಾಲಿಗೆ ನಿಗದಿಯಾದ ಮೊತ್ತದಲ್ಲಿ ರೂ.1600.98 ಲಕ್ಷಗಳು ಸೇರಿದಂತೆ ಒಟ್ಟು ರೂ.108775.50 ಲಕ್ಷಗಳನ್ನು ಬಿಡುಗಡೆ ಮಾಡಲಾಗಿದೆ.<br><br>4ನೇ ತ್ರೈಮಾಸಿಕ ವೇತನಕ್ಕೆ ಲಭ್ಯವಿರುವ ಅನುದಾನ – ರೂ.34657.52 ಲಕ್ಷಗಳು.<br><br>ನಾಲ್ಕನೇ ತ್ರೈಮಾಸಿಕ ಅನುದಾನ ರೂ.34657.52 ಲಕ್ಷಗಳ ಬಿಡುಗಡೆಯ ನಂತರವೂ ಕೊರತೆ ಉಂಟಾಗುವ ಜಿಲ್ಲೆಗಳಿಗೆ ಹೆಚ್ಚುವರಿಯಾಗಿ ಅಗತ್ಯವಾದ ರೂ.11783.87 ಲಕ್ಷಗಳ ಬಿಡುಗಡೆಗಾಗಿ ಜಿಲ್ಲೆಗಳಿಂದ ಬೇಡಿಕೆ ವಿವರಗಳನ್ನು ಪಡೆದು ಪರಿಶೀಲಿಸಲಾಗುತ್ತಿದೆ. |

ಇಡಿ 183 ಯೋಯೋಕ 2018

(ಹೆಚ್.ಡಿ.ಕುಮಾರಸ್ವಾಮಿ)
ಮುಖ್ಯಮಂತ್ರಿ